ವ್ಯರ್ಥ ವಸ್ತುಗಳಿಂದ ಸಂಗೀತ









ಬೆಟ್ಟದಂತೆ ಬೆಳೆದು ನಿಂತ ಹಾರುಕ್

ಕೊರಿಯಾದ ಈ ಒಂದೇ ಕಥೆ, ನೂರೆಂಟು ಕಥೆಗಳನ್ನು ಹೇಳುತ್ತದೆ..

ಅದು ಹೀಗಿದೆ– ಒಂದೂರಿನಲ್ಲಿ ಒಬ್ಬ ಮುದುಕ–ಮುದುಕಿ, ಬೆಟ್ಟದಲ್ಲಿ ವಾಸವಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಅದೊಂದು ದಿನ ಮಾಂತ್ರಿಕ ಮರವೊಂದು ಅವರಿಗೆ ಹಾರುಕ್ ಎನ್ನುವ ಪುಟ್ಟ ಮಗುವನ್ನು ನೀಡಿತು. 'ಈ ಮಗುವಿಗೆ ತಿನ್ನಲು ಇಬ್ಬನಿ ಮಾತ್ರ ಕೊಡಿ. ಬೇರೇನೂ ಕೊಡಬೇಡಿ' ಎಂದು ಆ ಮರ ಎಚ್ಚರಿಕೆಯನ್ನೂ ಕೊಟ್ಟಿತು.

ಅಜ್ಜ– ಅಜ್ಜಿಗೆ ತುಂಬ ಖುಷಿ. ಪುಟ್ಟ ಹಾರುಕ್ ಜತೆಗೆ ಸಂತೋಷದಿಂದ ಕಾಲ ಕಳೆದರು. ಹಾರುಕ್ ಬೆಳೆದು ದೊಡ್ಡವನಾದ. ಅದೊಂದು ದಿನ ತನಗೆ ತಿನ್ನಲು ಅನ್ನ ಕೊಡಿ ಎಂದ. ಖುಷಿಯಿಂದ ಅನ್ನ ಕೊಟ್ಟರು. ಹಾರುಕ್ ತಿನ್ನುತ್ತಾ ಬೆಳೆಯತೊಡಗಿದ. ದೊಡ್ಡದಾಗಿ ಬೆಳೆಯುತ್ತಿದ್ದಂತೆಲ್ಲ, ಕೊನೆಗೆ ಕೈಗೆ ಸಿಕ್ಕಿದ್ದನ್ನೆಲ್ಲ ತಿನ್ನತೊಡಗಿದ.

ಅಜ್ಜ– ಅಜ್ಜಿ ಕೆಲ ದಿನಗಳ ಮಟ್ಟಿಗೆ ಎಲ್ಲೋ ಹೋಗಿದ್ದರು. ಹಾರುಕ್ ಎದುರಿಗೆ ಸಿಕ್ಕಿದ ಮನುಷ್ಯರನ್ನೂ ತಿನ್ನತೊಡಗಿದ. ಏನು ಸಿಗುತ್ತದೋ ಅದನ್ನು ತಿನ್ನುವುದು ಅವನ ಅಭ್ಯಾಸವಾಯಿತು. ಅಜ್ಜ–ಅಜ್ಜಿ ಬಂದು ನೋಡುತ್ತಾರೆ– ಹಾರುಕ್ ತಿಂದು ತಿಂದು ಬೆಟ್ಟದಂತೆ ಬೆಳೆದಿದ್ದಾನೆ. ಹಸಿವೆ ತಾಳಲಾಗುತ್ತಿಲ್ಲ. ತಿನ್ನಲು ಏನಾದರೂ ಕೊಡಿ ಎಂದು ಕೇಳುತ್ತಿದ್ದಾನೆ! ಕೊನೆಗೆ ಆ ವೃದ್ಧ ದಂಪತಿ ಪ್ರೀತಿಯ ಮಗನಿಗೆ ತಮ್ಮನ್ನೇ ತಾವು ಆಹಾರವಾಗಿಸುತ್ತಾರೆ.

ಈ ಕಥೆಯನ್ನು ಇತ್ತೀಚೆಗೆ ಕೊರಿಯಾದ ಟ್ಯೂಡಾ ನಾಟಕ ತಂಡ 'ಟೇಲ್ ಆಫ್ ಹಾರುಕ್' ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ನಾಟಕವಾಡಿತು. ಇದು ಭಾರತದಲ್ಲೇ ಮೊದಲ ಪ್ರದರ್ಶನ. ಈ ನಾಟಕ 2002ರಲ್ಲೇ ಸಿಯೋಲ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಉತ್ತಮ ನಾಟಕ, ಉತ್ತಮ ರಂಗಕಥೆ, ಉತ್ತಮ ಕಲೆ– ವಿಭಾಗಗಳಲ್ಲಿ ಮೊದಲ ಪ್ರಶಸ್ತಿ ಪಡೆದಿತ್ತು.

ನಾಟಕ ಬರೆದು ನಿರ್ದೇಶಿಸಿದವರು ಬಾ ಯೆ ಸೂಪ್. ಕೊರಿಯನ್ ಸಾಂಪ್ರದಾಯಿಕ ಶೈಲಿಯಲ್ಲಿ ಕಾಗದದಿಂದ ಮಾಡಿದ ಗೊಂಬೆಗಳು, ವೈವಿಧ್ಯಮಯ ಮುಖವಾಡಗಳು ನಾಟಕದ ಉದ್ದಕ್ಕೂ ಗಮನ ಸೆಳೆದವು. ಅದಕ್ಕೂ ಮುಖ್ಯವಾಗಿ ಸಂಗೀತ ಪರಿಕರಗಳು! ಬಳಸಿ ಬಿಸಾಡಿದ ಬಾಟಲಿಗಳು, ಕೋಲುಗಳು, ಸೆಲ್ಲೊ ಟೇಪ್‌ಗಳು, ಒಡೆದ ಮಡಿಕೆಗಳು, ಕಸಚ ಬುಟ್ಟಿಯಿಂದ ಎತ್ತಿ ತಂದ ಸ್ಟ್ರಾಗಳು, ಪೇಪರ್ ಗಳನ್ನು ಬಳಸಿ ಅತ್ಯುತ್ತಮ ಹಿನ್ನೆಲೆ ಸಂಗೀತ ನೀಡಿದ್ದು ಏಕಕಾಲಕ್ಕೆ ಪರಿಸರಪ್ರೇಮದ ಸಂದೇಶವನ್ನೂ ನೀಡಿದಂತಿತ್ತು.

ಈ ನಾಟಕದ ಪ್ರದರ್ಶನ ಕಳೆದ ಎಂಟು ವರ್ಷಗಳಿಂದ ಜಗತ್ತಿನಾದ್ಯಂತ ನಡೆದಿದೆ. ಜಪಾನ್, ಚೀನಾ, ಸಿಂಗಪುರ, ಟರ್ಕಿ, ಆಸ್ಟ್ರೇಲಿಯಾ, ರಷ್ಯಾ, ಹಂಗೆರಿ, ಆಸ್ಟ್ರಿಯಾ ಮುಂತಾದ ದೇಶಗಳಿಗೆ ಆಹ್ವಾನದ ಮೇರೆಗೆ ಹೋಗಿ ನಾಟಕ ಪ್ರದರ್ಶಿಸಿರುವ ತಂಡ ಬೆಂಗಳೂರಿಗೂ ಕಾಲಿಟ್ಟಿತು. 2009ರ ರಶ್ಯಾದ ಕಿಂಗ್ ಫೆಸ್ಟಿವಲ್ ನಾಟಕ ಸ್ಪರ್ಧೆಯಲ್ಲೂ ಈ ನಾಟಕಕ್ಕೆ ಅತ್ಯುತ್ತಮ ನಾಟಕ ರಚನೆ ಮತ್ತು ಯುವ ವಿಮರ್ಶೆ ಬಹುಮಾನ ಲಭಿಸಿದೆ.

ನಾಟಕದ ದೃಶ್ಯವೈಭವ ನೋಡಿ ಫೋಟೊ ಕ್ಲಿಕ್ಕಿಸಲು ಹೊರಟರೆ ತಂಡದವರು ಬಿಡಲಿಲ್ಲ. ಫ್ಲಾಶ್‌ನಿಂದ ಅಭಿನಯಕ್ಕೆ ತೊಂದರೆ ಎನ್ನುವುದು ಅವರ ಆಕ್ಷೇಪ! (ನಮ್ಮವರಾದರೆ..?) ಕೊನೆಗೂ ಅವರ ಮನ ಒಲಿಸಿ, ಫ್ಲಾಶ್ ಇಲ್ಲದೆ, ನಟರಿಗೆ ತೊಂದರೆಯಾಗದಂತೆ ಒಂದಿಷ್ಟು ಕ್ಲಿಕ್ಕಿಸಿದೆ. 'ಸುಧಾ' ಓದುಗರಿಗಾಗಿ ಇಲ್ಲಿದೆ ಛಾಯಾನಾಟಕ!